





## ಪ್ರತಿಭಟನೆಯ ಬಿಂಬಗಳು

ಬೆಂಗಳೂರಿನ ಬಸವೇಶ್ವರ ವೃತ್ತದಿಂದ ಹೆಬ್ಬಾಳದವರೆಗೆ ರಾಜ್ಯ ಸರ್ಕಾರ ನಿರ್ಮಿಸಲು ಹೊರಟಿದ್ದ ಉಕ್ಕು ಸೇತುವೆಗೆ ಪರಿಸರವಾದಿಗಳಿಂದ ದೊಡ್ಡ ವಿರೋಧ ವ್ಯಕ್ತವಾಗಿತ್ತು. ಈ ಯೋಜನೆಯನ್ನು ವಿರೋಧಿಸುವ ನಿಟ್ಟಿನಲ್ಲಿ ನಿರ್ದೇಶಕ ಪವನ್ ಕುಮಾರ್ ಬಳಸಿಕೊಂಡಿದ್ದು ಕಿರುಚಿತ್ರ ಮಾಧ್ಯಮವನ್ನು.

‘ಬೆಂಗಳೂರಿನ ಜನತೆಗೆ ಬೇಕಿರುವುದು ಮರಗಳೇ ಹೊರತು ಉಕ್ಕು ಸೇತುವೆ ಅಲ್ಲ’ ಎಂದು ಕಿರುಚಿತ್ರವೊಂದನ್ನು ಮಾಡಿ ಸಾಮಾಜಿಕ ಜಾಲತಾಣದಲ್ಲಿ ಅಪ್ಲೋಡ್ ಮಾಡಿದ್ದ ಪವನ್, ಇತರರು ಕೂಡ ತಮ್ಮ ಪ್ರತಿಭಟನೆಯನ್ನು ದಾಖಲಿಸಲಿಕ್ಕಾಗಿ ಕಿರುಚಿತ್ರಗಳನ್ನು ನಿರ್ಮಿಸುವಂತೆ ಕೋರಿದ್ದರು. ದೃಶ್ಯಮಾಧ್ಯಮ ಹೆಚ್ಚು ಪ್ರಭಾವಶಾಲಿಯಾಗಿದ್ದು, ಬಹುಸಂಖ್ಯೆಯ ಜನರನ್ನು ತಲುಪಲಿದೆ ಎನ್ನುವ ಕಾರಣಕ್ಕಾಗಿ ಅವರು ತಮ್ಮ ಪ್ರತಿಭಟನೆಗೆ ಕಿರುಚಿತ್ರ ಮಾಧ್ಯಮವನ್ನು ಬಳಸಿಕೊಂಡಿದ್ದರು.

ಲೋಹದ ಸೇತುವೆಯ ದುಷ್ಪರಿಣಾಮಗಳನ್ನು ಮನವರಿಕೆ ಮಾಡುವ ಉತ್ತಮ ಕಿರುಚಿತ್ರದ ನಿರ್ದೇಶಕರಿಗೆ ಪವನ್ ತಮ್ಮ ನಿರ್ದೇಶನದ ಮುಂದಿನ ಸಿನಿಮಾದಲ್ಲಿ ಅವಕಾಶ ಕೊಡುವುದಾಗಿ ಹೇಳಿದ್ದರು.

ಮಾಧ್ಯಮ. ಆ ಕಾರಣದಿಂದಲೇ ಜಗತ್ತಿನ ಶ್ರೇಷ್ಠ ನಿರ್ದೇಶಕರು ಸಿನಿಮಾಗಳ ಜೊತೆಗೆ ಕಿರುಚಿತ್ರಗಳನ್ನೂ ಮಾಡಿಕೊಂಡು ಬಂದಿದ್ದಾರೆ. ನಮ್ಮಲ್ಲೂ ಈ ಪ್ರವೃತ್ತಿ ಹೆಚ್ಚಬೇಕು. ಕಿರುಚಿತ್ರ ಮಾಧ್ಯಮಕ್ಕೆ ಘನತೆ ತಂದುಕೊಡುವ ಜವಾಬ್ದಾರಿ ದೃಶ್ಯ ಮಾಧ್ಯಮದ ವ್ಯಕ್ತಿಗಳ ಜೊತೆಗೆ ಸಮುದಾಯಕ್ಕೂ ಸೇರಿದೆ’’ ಎನ್ನುವ ಅನಿಸಿಕೆ ಅವರದು.

### ತಂತ್ರಜ್ಞಾನದ ಜೊತೆಜೊತೆಗೆ...

ಸಿನಿಮಾಕ್ಕೆ ಪರ್ಯಾಯವಾಗಿ ಕಿರುಚಿತ್ರ ಮಾಧ್ಯಮ ಬೆಳೆಯುತ್ತಿದೆ. ಡಿಜಿಟಲ್ ತಂತ್ರಜ್ಞಾನದ ಉತ್ಕರ್ಷದ ನಂತರವಂತೂ ಕಿರುಚಿತ್ರಗಳ ತಯಾರಿ ಸುಲಭವಾಗಿದೆ. ಸಿನಿಮಾ ಹಾಗೂ ಪ್ರೇಕ್ಷಕನ ನಡುವೆಯಿದ್ದ ಅಡೆತಡೆಗಳಿಗೆ ಪರಿಹಾರದಂತಿರುವ



‘ಗೋಣಿಚೀಲ’ ಕಿರುಚಿತ್ರದ ದೃಶ್ಯ